2001-02

01	Jamia Masjid, Pathapalya	Construction of Mosque	20,000.00
02.	Norrani Masjid Nallaguttapalli Bagepalli	Construction of Mosque.	20,000.00
		Total	40,000.00

ರೇಷ್ಮೆ ಬೆಳೆಗೆ ನಿಗದಿತ ಬೆಲೆ

644(1143) ಶ್ರೀ ಸಂಪಂಗಿ ಎನ್(ಬಾಗೇಪಲ್ಲಿ) ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯಾದ್ಯಂತ ರೇಷ್ಮೆ ಬೆಳೆಗಾರರಿಗೆ ನಿಗದಿತ ಮಟ್ಟದಲ್ಲಿ ಬೆಲೆಯು ಸಿಗದೇ ತೀವ್ರ ರೀತಿಯಲ್ಲಿ ನಷ್ಟವನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹೊರ ರಾಜ್ಯಗಳಿಂದ ಹಾಗೂ ಹೊರ ದೇಶಗಳಿಂದ ಕಡಿಮೆ ಬೆಲೆಯಲ್ಲಿ ರೇಷ್ಮೆಯನ್ನು ಆಮದು ಮಾಡಿಕೊಂಡು ರಾಜ್ಯದ ರೈತರು ಬೆಳೆದ ರೇಷ್ಮೆಗೆ ನಿಗದಿತ ಪ್ರಮಾಣದಲ್ಲಿ ಬೆಲೆಯನ್ನು ನೀಡದೇ ರಾಜ್ಯದ ರೈತರನ್ನೇ ಸರ್ಕಾರವು ಕಡೆಗಣಿಸಿರುವುದು ನಿಜವಲ್ಲವೇ;

ಇ) ಈ ರೀತಿಯ ತಾರತಮ್ಯ ಮಾಡದೇ ರಾಜ್ಯದ ರೈತರಿಗೆ ರೇಷ್ಮೆ ಬೆಳೆಯಲ್ಲಿ ನಿಗದಿತ ಲಾಭವನ್ನು ದೊರಕಿಸಿಕೊಟ್ಟು ಅನುಕೂಲ ಮಾಡಲು ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು)

ಅ) ಹಿಂದಿನ ವರ್ಷಕ್ಕೆ ಹೋಲಿಸಿದಾಗ ರೇಷ್ಮೆಗೂಡಿನ ದರ ಕಡಿಮೆಯಾಗಿದೆ.

ಆ) ಆಮದು, ರಫ್ತು ನೀತಿ ಕೇಂದ್ರ ಸರ್ಕಾರದ್ದಾಗಿದೆ. ರೇಷ್ಮೆ ಗೂಡು ಮತ್ತು ರೇಷ್ಮೆಯನ್ನು ಬಹಿರಂಗ ಹರಾಜು ಮೂಲಕ ವಿತರಿಸಲಾಗುತ್ತಿದೆ. ರೇಷ್ಮೆಗೆ ಬೆಂಬಲ ಬೆಲೆ ನೀಡುವ ಬಗ್ಗೆ ಸಮಿತಿ ರಚಿಸಲಾಗಿದ್ದು, ಸಮಿತಿಯು ವರದಿಯನ್ನು ಸಲ್ಲಿಸಿದ್ದು ಅದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿರುತ್ತದೆ.

ಇ) ಆಮದು ರೇಷ್ಮೆ ಮೇಲಿನ ಸುಂಕವನ್ನು ಹೆಚ್ಚಿಸಲು, ರಫ್ತು ಮಾಡುವ ಜವಳಿ ಉತ್ಪಾದನೆಗೆ ಬಳಸುವ ಗುಣಮಟ್ಟದ ಮತ್ತು ಪ್ರಮಾಣದ ರೇಷ್ಮೆ ಮಾತ್ರ ಆಮದು ಮಾಡುವಂತೆ ಹಾಗೂ ರೇಷ್ಮೆ ಜವಳಿ ರಫ್ತುದಾರರು ಮಾತ್ರ ರೇಷ್ಮೆ ಆಮದು ಮಾಡುವಂತೆ ನಿರ್ಬಂಧಿಸಲು ಹಾಗೂ ನೆರೆ ರಾಷ್ಟ್ರಗಳಿಂದ ಕಳ್ಳ ಸಾಗಾಣಿಕೆಯಿಂದ ಬರುತ್ತಿರುವ ರೇಷ್ಮೆಯನ್ನು ತಡೆಗಟ್ಟಲು ಕೇಂದ್ರ ಸರ್ಕಾರವನ್ನು ಕೋರಲಾಗಿದೆ. ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ಮತ್ತು ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಗಳು ರೇಷ್ಮೆ ಗೂಡು ಮತ್ತು ರೇಷ್ಮೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಲು ಅನುಕೂಲವಾಗುವಂತೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಒದಗಿಸಲು ಪರಿಶೀಲಿಸಲಾಗುತ್ತಿದೆ.